# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
## ಯಲಹಂಕ, ಬೆಂಗಳೂರು.

**ಯಲಹಂಕ ಉಪನಗರ, ವಾರ್ಡ್ ನಂ:04 ಕ್ಕೆ ಸಂಬಂಧಿಸಿದಂತೆ ದಿನಾಂಕ:21/11/2020 ರಂದು ನಡೆದ ವಾರ್ಡ್ ಕಮಿಟಿ ಸಭೆಯ ನಡುವಳಿಗಳು.**

| ಕ್ರ.ಸಂ | ಸಭೆಯಲ್ಲಿ ಭಾಗವಹಿಸಿದ ಅಧಿಕಾರಿ ಹೆಸರು | ಪದನಾಮ |
|---|---|---|
| 1 | ಶ್ರೀ.ಮನೋಜ್‌ಜೈನ್, ಐ.ಎ.ಎಸ್ | ವಿಶೇಷ ಆಯುಕ್ತರು (ಯೋಜನೆ) ಬಿ.ಬಿ.ಎಂ.ಪಿ, ನೋಡಲ್ ಆಫೀಸರ್ (ವಾರ್ಡ್ ನಂ:04) |
| 2 | ಶ್ರೀ.ರಂಗನಾಥ್ | ಮುಖ್ಯ ಅಭಿಯಂತರರು, ಯಲಹಂಕ ವಲಯ |
| 3 | ಶ್ರೀ.ರಾಜೇಂದ್ರ ನಾಯ್ಕ್ | ಕಾರ್ಯಪಾಲಕ ಅಭಿಯಂತರರು, ಬಿ.ಬಿ.ಎಂ.ಪಿ, ವಿದ್ಯುತ್ ಗೈರು ಹಾಜರಾಗಿರುತ್ತಾರೆ. |
| 4 | ಶ್ರೀ.ದೇವೇಂದ್ರನಾಯ್ಕ್ | ಕಾರ್ಯಪಾಲಕ ಅಭಿಯಂತರರು, ಯೋಜನಾ ವಿಭಾಗ, ಯಲಹಂಕ ವಲಯ, ಬಿ.ಬಿ.ಎಂ.ಪಿ |
| 5 | ಶ್ರೀ.ಹೆಚ್.ಪಿ.ಸಚಿನ್ | ಸಹಾಯಕ ಕಾರ್ಯಪಾಲಕ ಅಭಿಯಂತರರು, ಯಲಹಂಕ ಉಪನಗರ ಉಪವಿಭಾಗ |
| 6 | ಶ್ರೀ.ಹೆಚ್.ಕೆ.ದೇವರಾಜ್ | ಸಹಾಯಕ ಕಾರ್ಯಪಾಲಕ ಅಭಿಯಂತರರು, (Road infrastructure, BBMP) |
| 7 | ಶ್ರೀ.ಶ್ರೀನಿವಾಸ್ | ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಬಿ.ಎಂ.ಪಿ ರಾಜಕಾಲುವೆ, (ಗೈರು ಹಾಜರಾಗಿರುತ್ತಾರೆ) |
| 8 | ಶ್ರೀ.ಪ್ರಕಾಶ್.ಕೆ.ವಿ. | ಸಹಾಯಕ ಕಾರ್ಯಪಾಲಕ ಅಭಿಯಂತರರು (ಕೆರೆಗಳು ವಿಭಾಗ) |
| 9 | ಶ್ರೀ.ಪ್ರಭುದ್ದ ಕಾಂಬ್ಳೆ | ಸಹಾಯಕ ಕಾರ್ಯಪಾಲಕ ಅಭಿಯಂತರರು, (Solid Waste Management, BBMP) |
| 10 | ಶ್ರೀಮತಿ.ಅನುಸೂಯ.ಡಿ. | ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ (ಒಳಚರಂಡಿ) |
| 11 | ಶ್ರೀ.ಪಿ.ಎಂ.ಮಲ್ಯಾದ್ರಿ | ತೋಟಗಾರಿಕೆ ಇಲಾಖೆ, ಸೂಪರ್‌ವೈಸರ್ ಯಲಹಂಕ ವಲಯ |
| 12 | ಶ್ರೀ.ಓ.ಜಿ.ಯೋಗೇಶ್ | ಸಹಾಯಕ ಅಭಿಯಂತರರು, ನಗರ ಯೋಜನೆ (ಗೈರು ಹಾಜರಿ) |
| 13 | ಶ್ರೀ.ರಾಮಸಂಜೀವಯ್ಯ | ಸಹಾಯಕ ಅಭಿಯಂತರರು ಹಾಗೂ ಕಾರ್ಯದರ್ಶಿ |

| | | |
|---|---|---|
| | | ವಾರ್ಡ್ ನಂ:04 |
| 14 | ಶ್ರೀ.ವಿನಾಯಕ.ಕೆ.ಎಂ, | ಸಹಾಯಕ ಅಭಿಯಂತರರು, ಬಿ.ಡಬ್ಲ್ಯು.ಎಸ್.ಎಸ್.ಬಿ |
| 15 | ಶ್ರೀ.ಭೈರೇಶ್ | ಸಹಾಯಕ ಅಭಿಯಂತರರು, ಕೆರೆ ಅಭಿವೃದ್ಧಿ (ಗೈರು ಹಾಜರಿ) |
| 16 | ಶ್ರೀ.ಆನಂದ್.ಎ | ಸಹಾಯಕ ಅಭಿಯಂತರರು, ಬೆಸ್ಕಾಂ, ಯಲಹಂಕ |
| 17 | ಶ್ರೀ.ಪಾವನ ನಾಗತಿ | ಸಹಾಯಕ ಅಭಿಯಂತರರು (ಯೋಜನಾ ವಿಭಾಗ, ಯಲಹಂಕ ವಲಯ) (ಗೈರು ಹಾಜರಿ) |
| 18 | ಶ್ರೀ.ಲಿಂಗರಾಜು | ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ:04 ಘನತ್ಯಾಜ್ಯ ನಿರ್ವಹಣೆ |
| 19 | ಶ್ರೀ.ಹೇಮಂತ್.ಕೆ.ಸಿ | ಪಿ.ಎಸ್.ಐ |
| 20 | ಶ್ರೀಮತಿ.ಎನ್.ನೇತ್ರಾವತಿ | ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ:04, ಘನತ್ಯಾಜ್ಯ ನಿರ್ವಹಣೆ |
| 21 | ಶ್ರೀ.ದೇವರಾಜ್.ಹೆಚ್.ಕೆ. | ಸಹಾಯಕ ಕಾರ್ಯಪಾಲಕ ಅಭಿಯಂತರರು, ರೋಡ್ಇನ್ಫ್ರಾಸ್ಟ್ರಕ್ಚರ್, ಬಿ.ಬಿ.ಎಂ.ಪಿ |
| 22 | ಶ್ರೀಮತಿ.ಅನಿತಾ | ಕಂದಾಯ ಪರಿವೀಕ್ಷಕರು, (ಗೈರು ಹಾಜರಿ) |
| 23 | ಶ್ರೀ.ಶೇಖರ್ | ಯಲಹಂಕ ವಲಯ (ಬಿ.ಬಿ.ಎಂ.ಪಿ ಅರಣ್ಯ) ಆರ್.ಎಫ್.ಓ ಪರವಾಗಿ |
| 24 | ಠಾಣಾಧಿಕಾರಿ | ಯಲಹಂಕ ಓಲ್ಡ್ ಟೌನ್, ಪೋಲೀಸ್ ಠಾಣೆ (ಗೈರು ಹಾಜರಿ) |
| 25 | ಶ್ರೀ.ಕೃಷ್ಣಪ್ಪ | ಟ್ರಾಫಿಕ್ ಪೋಲೀಸ್ ಠಾಣೆ, ಯಲಹಂಕ (ಗೈರು ಹಾಜರಿ) |
| 26 | ಶ್ರೀ.ಪ್ರವೀಣ್‌ಕುಮಾರ್.ಟಿ.ಕೆ | ಸಹಾಯಕ ಅಭಿಯಂತರರು (ಲೇಕ್) |
| 27 | ಶ್ರೀ.ಎಸ್.ಎಂ.ಪ್ರಸಾದ್ | ಸೆಕ್ಟರ್ ಆಫೀಸರ್, ಕೋವಿಡ್-19 |
| 28 | ಶ್ರೀ.ರಾಜಣ್ಣ.ಸಿ | ಪಿ.ಎಸ್.ಐ, ಯಲಹಂಕ ನ್ಯೂ ಟೌನ್, ಬೆಂಗಳೂರು |
| 29 | ಶ್ರೀ.ಲಕ್ಷ್ಮಿನಾರಾಯಣಪ್ಪ | BBMP, ಜಾನುವಾರು ಅಧಿಕಾರಿ (Animal Husbandry) |
| 30 | ಶ್ರೀ.ಸತೀಶ್.ಎಂ | ಮಾಜಿ ಬಿ.ಬಿ.ಎಂ.ಪಿ ಸದಸ್ಯರು, ವಾರ್ಡ್ ನಂ:04 |
| 31 | ಶ್ರೀ.ಪದ್ಮಪಾಟೀಲ್ | ಪೂರ್ವಾಂಕರ ಅಪಾರ್ಟ್‌ಮೆಂಟ್, RWA |
| 32 | ಶ್ರೀ.ಟಿ.ಕೆ.ಪುಟ್ಟಸ್ವಾಮಿ | RWA, B sector |
| 33 | ಶ್ರೀ.ಆರ್.ಪುಟ್ಟಸ್ವಾಮಿ | RWA, B sector |
| 34 | ಶ್ರೀ.ಗಂಗಾಧರನ್.ಕೆ.ಟಿ | RWA, B sector |

| | | |
|---|---|---|
| 35 | ಶ್ರೀ.ವಿಜಯ್‌ಕುಮಾರ್.ಕೆ. | RWA, B sector |
| 36 | ಶ್ರೀ.ಮಣಿ | LBS Nagara, Pot hole contractor (ಗೈರು ಹಾಜರಿ) |
| 37 | ಶ್ರೀ.ಬೋರೇಗೌಡ | RWA, Sharada Nagara (ಗೈರು ಹಾಜರಿ) |
| 38 | ಶ್ರೀ.ಬಿ.ಸಿ.ಶಂಕರ್‌ರೆಡ್ಡಿ, | RWA, Mathrulayout (ಗೈರು ಹಾಜರಿ) |
| 39 | ಆರ್.ಸತೀಶ್ | SWM Contractor, (ಗೈರು ಹಾಜರಿ) |
| 40 | ಶ್ರೀ.ನರಸಿಂಹರೆಡ್ಡಿ | Electrical Contractor (ಗೈರು ಹಾಜರಿ) |
| 41 | ಶ್ರೀ.ಓಬ್‌ಲೇಶ್ | Contractor (ಗೈರು ಹಾಜರಿ) |
| 42 | ಶ್ರೀ.ರವಿ.ಜಿ | RWA, A Sector (ಗೈರು ಹಾಜರಿ) |

ದಿನಾಂಕ:21.11.2020 ರಂದು ಬೆಳಿಗ್ಗೆ 11.00 ಗಂಟೆಗೆ ಸಹಾಯಕ ಕಾರ್ಯಪಾಲಕ ಅಭಿಯಂತರರು, ಯಲಹಂಕ ಉಪನಗರ ಉಪವಿಭಾಗ ಕಛೇರಿಯಲ್ಲಿ ಶ್ರೀ.ಮನೋಜ್ ಜೈನ್, ನೋಡಲ್ ಆಫೀಸರ್, ವಾರ್ಡ್ ನಂ:04 ಇವರು ಬಿ.ಬಿ.ಎಂ.ಪಿ ಅಧಿಕಾರಿಗಳು ಹಾಗೂ ಇತರ ಇಲಾಖಾ ಅಧಿಕಾರಿಗಳೊಂದಿಗೆ ನಡೆಸಿದ ವಾರ್ಡ್ ಕಮಿಟಿ ಸಮಿತಿ ಸಭೆಯ ನಡುವಳಿಗಳು.

ಶ್ರೀ.ಸಚಿನ್, ಸಹಾಯಕ ಕಾರ್ಯಪಾಲಕ ಅಭಿಯಂತರರು ರವರು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ ಶ್ರೀ.ಮನೋಜ್ ಜೈನ್, ವಿಶೇಷ ಆಯುಕ್ತರು, ಬಿ.ಬಿ.ಎಂ.ಪಿ (ಯೋಜನೆ), ವಾರ್ಡ್ ನಂ:04 ರ ನೋಡಲ್ ಆಫೀಸರ್ ರವರನ್ನು ಸಭೆಗೆ ಸ್ವಾಗತ ಕೋರುತ್ತಾ ನಂತರ ಸಭೆಯನ್ನು ಪ್ರಾರಂಭ ಮಾಡಲಾಯಿತು.

ಶ್ರೀ.ಮನೋಜ್‌ಜೈನ್, ವಿಶೇಷ ಆಯುಕ್ತರು, ಬಿ.ಬಿ.ಎಂ.ಪಿ (ಯೋಜನೆ) ನೋಡಲ್ ಆಫೀಸರ್ ರವರು ವಾರ್ಡ್ ಕಮಿಟಿ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ, ರೆಸಿಡೆನ್ಷಿಯಲ್ ವೆಲ್‌ಫೇರ್ ಅಸೋಸಿಯೇಷನ್ ಶ್ರೀಮತಿ.ಪದ್ಮಪಾಟೀಲ್ ರವರು ಕಸದ ಸಮಸ್ಯೆ ಬಗ್ಗೆ ವಿವರಣೆ ನೀಡಿದರು.

1. ರೆಸಿಡೆನ್ಷಿಯಲ್ ವೆಲ್‌ಫೇರ್ ಅಸೋಸಿಯೇಷನ್‌ನ ಶ್ರೀ.ಪದ್ಮಪಾಟೀಲ್ ರವರು ಒಣಕಸವು ಹಸಿಕಸದಲ್ಲಿ ಮಿಶ್ರಣ ಮಾಡಿ ಹಾಗೂ ಕೋವಿಡ್-19 ರ ತ್ಯಾಜ್ಯವನ್ನು ಮಿಶ್ರಣ ಮಾಡಿ ಸಾಗಿಸುತ್ತಿರುತ್ತಾರೆಂದು ಆಕ್ಷೇಪಣೆ ವ್ಯಕ್ತಪಡಿಸಿರುತ್ತಾರೆ.

ಕ್ರಮ: ಕಿರಿಯ ಆರೋಗ್ಯ ನಿರೀಕ್ಷಕರವರು ಸದರಿ ವಿಷಯದ ಬಗ್ಗೆ ಪರಿಶೀಲಿಸಿ ಕ್ರಮಕೈಗೊಳ್ಳಲಾಗುವುದೆಂದು ವಿವರಣೆ ನೀಡಿದರು ಹಾಗೂ ಸಂಬಂಧಿಸಿದ ಗುತ್ತಿಗೆದಾರರಿಗೆ ತಿಳುವಳಿಕೆ ಪತ್ರವನ್ನು ನೀಡುವಂತೆ ನೋಡಲ್ ಅಧಿಕಾರಿಯವರು ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣೆ ರವರಿಗೆ ಸೂಚಿಸಿದರು,

2. ರೆಸಿಡೆನ್ಷಿಯಲ್ ವೆಲ್‌ಫೇರ್ ಅಸೋಸಿಯೇಷನ್‌ರವರಾದ ಶ್ರೀ.ಪುಟ್ಟಸ್ವಾಮಿ.ಟಿ.ಕೆ.ರವರು 6ನೇ ಬಿ ಮುಖ್ಯರಸ್ತೆ ಮತ್ತು 7ನೇ ಬಿ ಮುಖ್ಯರಸ್ತೆಯಲ್ಲಿರುವ ಪಾರ್ಕ್‌ಗೆ ನಡೆಯುತ್ತಿರುವ ಗ್ರಿಲ್‌ಫೆನ್ಸಿಂಗ್ ಕಾಮಗಾರಿಗೆ ತುರ್ತಾಗಿ ಪೈಯಿಂಟಿಂಗ್ ಮಾಡದೇ ಇರುವ ಬಗ್ಗೆ ಆಕ್ಷೇಪಣೆ ವ್ಯಕ್ತಪಡಿಸಿದರು.

ಕ್ರಮ: ಸಹಾಯಕ ಅಭಿಯಂತರರು, ವಾರ್ಡ್ ನಂ:04 ರವರು ಸದರಿ ಕಾಮಗಾರಿಗೆ ಸಂಬಂಧಿಸಿದಂತೆ ಗ್ರಿಲ್ ಫೆನ್ಸಿಂಗ್‌ಗೆ ಬಣ್ಣ ಬಳಿಯುವ ಕಾಮಗಾರಿಯನ್ನು ಒಂದು ವಾರದಲ್ಲಿ ಪೂರ್ಣಗೊಳಿಸುತ್ತೇವೆಂದು ಸಭೆಗೆ ತಿಳಿಸಿದರು.

3. ನೋಡಲ್ ಅಧಿಕಾರಿಯವರು, ವಾರ್ಡ್ ನಂ:04 ರಲ್ಲಿನ ಪ್ರದೇಶಗಳಲ್ಲಿನ ಘನತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದಂತೆ ಸಹಾಯಕ ಕಾರ್ಯಪಾಲಕ ಅಭಿಯಂತರರು ಹಾಗೂ ಕಿರಿಯ ಆರೋಗ್ಯ ನಿರೀಕ್ಷಕರು ರವರಲ್ಲಿ ವಿವರಣೆ ಕೇಳಿದರು.

ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು ಹಾಗೂ ಕಿರಿಯ ಆರೋಗ್ಯ ನಿರೀಕ್ಷಕರು, ಘನತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದಂತೆ ವಾರ್ಡ್ ನಂ:04 ರಲ್ಲಿ ಒಟ್ಟು 21 (ಇಪ್ಪತ್ತೊಂದು) ಬ್ಲಾಕ್‌ಗಳನ್ನು ಮಾಡಲಾಗಿದ್ದು, ಸದರಿ ಬ್ಲಾಕ್‌ಗಳಿಗೆ ಆಟೋ ಟಿಪ್ಪರ್‌ಗಳು ಮನೆಮನೆಗೆ ಹೋಗಿ ಕಸ ಸಂಗ್ರಹಣೆ ಮಾಡಲಾಗುತ್ತದೆ ಎಂದು ತಿಳಿಸಿದರು. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ನೋಡಲ್ ಅಧಿಕಾರಿವರು 21 ಬ್ಲಾಕ್‌ಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಆಟೋ ಟಿಪ್ಪರ್‌ಗಳ ವಾಹನ ಸಂಖ್ಯೆ, ಚಾಲಕನ ಹೆಸರು ಹಾಗೂ ಕಸ ಸಂಗ್ರಹಣೆ ಮಾಡುವ ಬ್ಲಾಕ್‌ಗಳ ನಂಬರ್ ವಿವರ ಮತ್ತು ಸಮಯ, ಚಾಲಕನ ಮೊಬೈಲ್ ನಂಬರ್ ಹಾಗೂ ಪ್ರತಿಯೊಂದು ಬ್ಲಾಕ್‌ಗಳ ಆಯಾಯ ಪ್ರದೇಶಕ್ಕೆ ಸಂಬಂಧಿಸಿದಂತೆ ಪ್ರತಿನಿಧಿಯ ಹೆಸರುಗಳು ಮತ್ತು 21 ಸಂಖ್ಯೆ ಬ್ಲಾಕ್‌ಗಳ ಸ್ಕೆಚ್‌ಕಾಪಿಯನ್ನು ವಾಟ್ಸ್‌ಆಪ್ ಗ್ರೂಪ್‌ನಲ್ಲಿ ಅಪ್‌ಲೋಡ್ ಮಾಡಲು ಸೂಚಿಸಿದರು.

4. ನೋಡಲ್ ಅಧಿಕಾರಿಯವರು ಘನತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದಂತೆ ಆಟೋ, ಟಿಪ್ಪರ್ ವಾಹನಗಳ ಚಾಲಕರು ಕಸಸಂಗ್ರಹಣೆ ಮಾಡುವ ಸಮಯದಲ್ಲಿ ವಿಶಲ್ ಊದುವುದು ಹಾಗೂ ಆಟೋ ಟಿಪ್ಪರ್‌ಗಳ ಗುಣಮಟ್ಟದ ಬಗ್ಗೆ ಆಗಾಗ್ಗೆ ತಪಾಸಣೆ ಮಾಡುವಂತೆ ಸಹಾಯಕ ಕಾರ್ಯಪಾಲಕ ಅಭಿಯಂತರರು, ಕಿರಿಯ ಆರೋಗ್ಯ ಪರಿವೀಕ್ಷಕರು ಘನತ್ಯಾಜ್ಯ ನಿರ್ವಹಣೆ ರವರಿಗೆ ಸೂಚಿಸಿದರು.

5. ನೋಡಲ್ ಅಧಿಕಾರಿಯವರು, ಘನತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದಂತೆ ಹೆಚ್ಚುವರಿ 5 ವಾಹನಗಳನ್ನು ಪಡೆಯುವುದಕ್ಕೆ ವಾರ್ಡ್ ಕಮಿಟಿ ಸಭೆಯಲ್ಲಿ ಅನುಮೋದನೆ ಪಡೆದು ಸಂಬಂಧಪಟ್ಟವರಿಗೆ ಕಡತ ಸಲ್ಲಿಸಲು ಸೂಚಿಸಿದರು.

6. ಘನತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದಂತೆ ಬಲ್ಕ್‌ವೇಸ್ಟ್ ಜನರೇಟರ್ಸ್‌ನ ವಿವರಣೆಯನ್ನು ನೀಡುವಂತೆ ಹಿರಿಯ ಆರೋಗ್ಯ ನಿರೀಕ್ಷರವರಿಗೆ ನೋಡಲ್ ಅಧಿಕಾರಿಯವರಿಗೆ ಸೂಚಿಸಿದರು.

ಕ್ರಮ :ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಹಿರಿಯ ಆರೋಗ್ಯ ನಿರೀಕ್ಷಕರು 11 ಸಂಖ್ಯೆ ವಸತಿ ಸಂಕೀರ್ಣ ಹಾಗೂ 10 ಸಂಖ್ಯೆ ಹೋಟೆಲ್, ಒಟ್ಟು 21 ಸಂಖ್ಯೆ ಬಲ್ಕ್ ವೇಸ್ಟ್ ಜನರೇಟರ್ಸ್ ಇರುವುದಾಗಿ ಸಭೆಗೆ ತಿಳಿಸಿದರು. ನೋಡಲ್ ಅಧಿಕಾರಿಯವರು ಬಲ್ಕ್ ವೇಸ್ಟ್ ಜನರೇಟರ್ಸ್‌ನ ಗುತ್ತಿಗೆದಾರರು ಸಮರ್ಪಕವಾಗಿ ಕಾರ್ಯನಿರ್ವಹಿಸದೇ ಇರುವುದಕ್ಕೆ ತಿಳುವಳಿಕೆ ಪತ್ರವನ್ನು ಜಾರಿ ಮಾಡಲು ಹಿರಿಯ ಆರೋಗ್ಯ ಪರಿವೀಕ್ಷರಿಗೆ ಸೂಚಿಸಿದರು ಹಾಗೂ ಬಲ್ಕ್ ವೆಸ್ಟ್‌ಗೆ ಸಂಬಂಧಿಸಿದಂತೆ ಗುತ್ತಿಗೆದಾರರ ಹೆಸರು, ವಾಹನ ಸಂಖ್ಯೆ, ಚಾಲಕನ ಹೆಸರು, ಮೊಬೈಲ್ ದೂರವಾಣಿ ಸಂಖ್ಯೆ ಇತ್ಯಾದಿ.., ವಿವರಣೆಗಳನ್ನು ಸಲ್ಲಿಸುವಂತೆ ಹಿರಿಯ ಆರೋಗ್ಯ ನಿರೀಕ್ಷಕರಿಗೆ ನೋಡಲ್ ಅಧಿಕಾರಿಯವರು ಸೂಚಿಸಿದರು.

7. ಸಹಾಯಕ ಅಭಿಯಂತರರು, ಬೆಸ್ಕಾಂ ಹಾಗೂ ಬಿ.ಡಬ್ಲ್ಯು.ಎಸ್.ಎಸ್.ಬಿ ಅಭಿಯಂತರರಿಗೆ ವಾರ್ಡ್ ನಂ:04 ರ ಪ್ರದೇಶಗಳ ರಸ್ತೆಗಳಲ್ಲಿ ನೀರಿನ ಕೊಳವೆ ಸಾಲು ಹಾಗೂ ಒಳಚರಂಡಿ ವ್ಯವಸ್ಥೆ ಕಲ್ಪಿಸುವುದಕ್ಕೆ ಮತ್ತು ಬೆಸ್ಕಾಂ ಕೇಬಲ್‌ಗಳನ್ನು ಅಳವಡಿಸುವುದಕ್ಕೆ ಕಡ್ಡಾಯವಾಗಿ ಬಿ.ಬಿ.ಎಂ.ಪಿ ವತಿಯಿಂದ ಪೂರ್ವಾನುಮತಿಯನ್ನು ಪಡೆಯಲು ಅಭಿಯಂತರರಿಗೆ ಸೂಚಿಸಿದರು.

8. ಕನಕನಗರ ಪ್ರದೇಶಕ್ಕೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಸಮರ್ಪಕವಾಗಿ ಪೂರೈಸುವಂತೆ ಬಿ.ಡಬ್ಲ್ಯು.ಎಸ್.ಎಸ್.ಬಿ ಅಭಿಯಂತರರಿಗೆ ಸೂಚಿಸಿದರು.

9. ಯಲಹಂಕ ಉಪನಗರ, 16ನೇ ಬಿ ಅಡ್ಡರಸ್ತೆಯಲ್ಲಿ ಬಿ.ಡಬ್ಲ್ಯು.ಎಸ್.ಎಸ್.ಬಿ ವತಿಯಿಂದ ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸಲು ರಸ್ತೆ ಕತ್ತರಿಸಿ ಕೊಳವೆ ಸಾಲುಗಳನ್ನು

ಅಳವಡಿಸಲಾಗಿರುತ್ತದೆ. ಆದರೆ ಕತ್ತರಿಸಿರುವ ರಸ್ತೆಯ ಭಾಗವನ್ನು ಸರಿಯಾದ ರೀತಿಯಲ್ಲಿ ರೆಸ್ಟೋರೇಷನ್‌ನ್ನು ಮಾಡದೇ ಇರುವುದರಿಂದ ರಸ್ತೆಯಲ್ಲಿ ಸಂಚರಿಸುವ ವಾಹನಗಳು ಹಾಗೂ ಪಾದಚಾರಿ ಮಾರ್ಗಗಳಲ್ಲಿ ಓಡಾಡುವ ಸಾರ್ವಜನಿಕರಿಗೆ ತುಂಬಾ ಅನಾನುಕೂಲ ಉಂಟಾಗಿರುತ್ತದೆ ಎಂಬುದಾಗಿ ರೆಸಿಡೆನ್ಶಿಯಲ್ ವೆಲ್‌ಫೇರ್ ಅಸೋಸಿಯೇಷನ್ ರವರು ಆಕ್ಷೇಪಣೆ ವ್ಯಕ್ತಪಡಿಸಿರುತ್ತಾರೆ.

ಕ್ರಮ: ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಸಹಾಯಕ ಕಾರ್ಯಪಾಲಕ ಅಭಿಯಂತರರು, ಒಳಚರಂಡಿ ವಿಭಾಗ, ಬಿ.ಡಬ್ಲ್ಯು.ಎಸ್.ಎಸ್.ಬಿ ರವರು ಕತ್ತರಿಸಿರುವ ರಸ್ತೆಯ ಭಾಗವನ್ನು ರೆಸ್ಟೋರೇಷನ್ ಮಾಡಿ ಡಾಂಬರ್ ಹಾಕುವುದಾಗಿ ಸಭೆಗೆ ತಿಳಿಸಿದರು.

10. ವಾರ್ಡ್ ನಂ:04 ರಲ್ಲಿರುವ ಪಾರ್ಕ್‌ಗಳಲ್ಲಿ ಉತ್ಪತ್ತಿಯಾಗುವ ಎಲೆಗಳು ಹಾಗೂ ಸಣ್ಣ, ಸಣ್ಣ ಮರದ ಕೊಂಬೆಗಳನ್ನು ಕತ್ತರಿಸಲು ಶೆಡ್ಡರ್ಸ್‌ಗಳನ್ನು ಒದಗಿಸುವಂತೆ ಬಿ.ಬಿ.ಎಂ.ಪಿ ತೋಟಗಾರಿಕೆ ಇಲಾಖೆ ಅಧೀಕ್ಷಕರಿಗೆ ಸೂಚಿಸಿದರು.

11. ಸೋಮೇಶ್ವರ ನಗರ ಮುಖ್ಯರಸ್ತೆ, ಋಷಿ ಆಸ್ಪತ್ರೆ ಹತ್ತಿರ ರಾಜಕಾಲುವೆ ಪಕ್ಕದಲ್ಲಿ ಘನತ್ಯಾಜ್ಯವನ್ನು ರಾಶಿರಾಶಿ ಹಾಕುತ್ತಿರುತ್ತಾರೆ. ಇದರ ಬಗ್ಗೆ ಪರಿಶೀಲಿಸಿ ಕ್ರಮಕೈಗೊಳ್ಳುವಂತೆ ರೆಸಿಡೆನ್ಸ್ ವೆಲ್‌ಫೇರ್ ಅಸೋಸಿಯೇಷನ್ ರವರು ಸಭೆಯಲ್ಲಿ ಕೋರಿರುತ್ತಾರೆ.

ಕ್ರಮ:–ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಸ್ಥಳ ಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ನೋಡಲ್ ಅಧಿಕಾರಿಯವರು ಸೂಚಿಸಿದರು.

12. ಕಾರ್ಯಪಾಲಕ ಅಭಿಯಂತರರು, ರಾಜಕಾಲುವೆ ಬಿ.ಬಿ.ಎಂ.ಪಿ ರವರು ಹಾಗೂ ವಾರ್ಡ್ ನಂ:04 ಕ್ಕೆ ಸಂಬಂಧಿಸಿದಂತೆ ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿ ಬರುವ ಕಛೇರಿಗಳ ಅಧಿಕಾರಿಗಳಿಗೆ ಮುಂಬರುವ ವಾರ್ಡ್ ಕಮಿಟಿ ಸಭೆಗೆ ಕಡ್ಡಾಯವಾಗಿ ಹಾಜರಾಗುವಂತೆ ಪತ್ರವನ್ನು ಬರೆಯಲು ಮತ್ತು ಗೈರು ಹಾಜರಾಗಿರುವವರಿಗೆ ನೋಟೀಸ್ ಜಾರಿ ಮಾಡುವಂತೆ ನೋಡಲ್ ಅಧಿಕಾರಿಯವರು ಸೂಚಿಸಿದರು.

ಮುಂದಿನ ಸಭೆಯಲ್ಲಿ ಸಂಬಂಧಪಟ್ಟ ಅಧಿಕಾರಿಗಳು ತೆಗೆದುಕೊಂಡ ಕ್ರಮದ ಬಗ್ಗೆ ಚರ್ಚಿಸಲಾಗುವುದೆಂದು ತಿಳಿಸುತ್ತಾ ಸಭೆಯಲ್ಲಿ ಹಾಜರಿದ್ದ ಎಲ್ಲರಿಗೂ ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

Ramasanjeevaiah

ಶ್ರೀ.ರಾಮಸಂಜೀವಯ್ಯ,
ಸಹಾಯಕ ಅಭಿಯಂತರರು
ಹಾಗೂ ವಾರ್ಡ್ ಕಾರ್ಯದರ್ಶಿ, ವಾರ್ಡ್ ನಂ:04,

ಶ್ರೀ.ಮನೋಜ್‌ಜೈನ್
ವಿಶೇಷ ಆಯುಕ್ತರು (ಯೋಜನೆ)
ಬಿ.ಬಿ.ಎಂ.ಪಿ, ನೋಡಲ್ ಅಧಿಕಾರಿ (ವಾರ್ಡ್ ನಂ:04)